ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಸಿ3(5):ಪ್ರಾಶಿ:ಬೋಹುವಿ:04:2019-20 ದಿನಾಂಕ:06/12/2021.

**ನೆನಪೋಲೆ**

ವಿಷಯ: ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರನ್ನು ಅನ್ಯ ಇಲಾಖೆಗೆ ನಿಯೋಜಿಸಿರುವುದನ್ನು ರದ್ದುಪಡಿಸಿ ಮಾತೃ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಕ್ರಮದ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಪತ್ರ ಸಂಖ್ಯೆ ಸಿ3(5): ಪ್ರಾಶಿ: ಆಇ. ನಿ: 18: 2016-17 ದಿನಾಂಕ: 04/07/2016.

2.ಸರ್ಕಾರದಪತ್ರಸಂಖ್ಯೆ:ಸಿ1/ಕೆಎಸ್ಎಲ್ಎಮ್ಎ/ಸಿಆರ್50/2012-13 ವಾಲ್ಯೂಮ್-2/18-19 ದಿನಾಂಕ:28/09/2018.

3.ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:12/10/2021.

--------

ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರುಗಳನ್ನು ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಯೋಜನೆ ಮೇರೆಗೆ ಸರ್ಕಾರವು ಉಲ್ಲೇಖ (2) ರಂತೆ ನೇಮಕಮಾಡಿಕೊಳ್ಳಲು ಜಿಲ್ಲಾ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ ಅನುಮತಿ ನೀಡಿ ಆದೇಶಿಸಿರುತ್ತದೆ. ಸದರಿ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, 2018-19 ರಿಂದ 2020-21ನೇ ಸಾಲಿನವರೆಗೆ ಜಿಲ್ಲಾ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು/ಇತರೆ ಅಧಿಕಾರಿಗಳು ನಿಯೋಜಿಸಿರುವುದು ಸರಿಯಷ್ಟೆ. ಸದರಿ ಶಿಕ್ಷಕರುಗಳ ನಿಯೋಜನೆ ಮಾರ್ಚ್-2021ಕ್ಕೆ ಅಂತ್ಯವಾಗಿದ್ದು ಹಾಗೂ ಕೆಲವು ಶಿಕ್ಷಕರು ಬೋಧಕೇತರ ಹುದ್ದೆಗಳಿಗೆ ನಿಯೋಜನೆಗೊಳಿಸಿರುವುದರಿಂದ, ಇದರಿಂದಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹಾಗೂ ಶೈಕ್ಷಣಿಕ ಬೆಳವಣಿಗೆಗೆ ಹಿನ್ನೆಡೆ ಉಂಟಾಗುತ್ತಿದೆ.

ಇದರಿಂದಾಗಿ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಿಯೋಜಿಸಿರುವ ಶಿಕ್ಷಕರ ನಿಯೋಜನೆಯನ್ನು ರದ್ದುಪಡಿಸಬೇಕಾಗಿರುವುದರಿಂದ, ಉಲ್ಲೇಖಿತ ಪತ್ರ (3) ರಲ್ಲಿ ಅಧಿಕೃತ ಜ್ಞಾಪನ ಹೊರಡಿಸಿ, ಸದರಿ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರನ್ನು ಅನ್ಯ ಇಲಾಖೆಗೆ ನಿಯೋಜಿಸಿರುವುದನ್ನು ರದ್ದುಪಡಿಸಿ, ಮಾತೃ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ ಕ್ರಮ ಕೈಗೊಳ್ಳಲು ತಿಳಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ತಿಳಿಸಲಾಗಿತ್ತು.

ಮುಂದುವರೆದು, ಸದರಿ ಶಿಕ್ಷಕರ ನಿಯೋಜನೆಯನ್ನು ಈವರೆಗೆ ರದ್ದುಪಡಿಸಿ ಮಾತೃ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ನಿಮ್ಮ ಜಿಲ್ಲೆಯಲ್ಲಿ ಕೈಗೊಂಡ ಕ್ರಮದ ವರದಿಯನ್ನು ಈ ಕೆಳಕಂಡ ನಮೂನೆಯಲ್ಲಿ ತಕ್ಷಣ ಮರುಟಪಾಲಿನಲ್ಲಿ ಸಲ್ಲಿಸುವುದು.

**::ನಮೂನೆ::**

| ಕ್ರಸಂ | ನಿಮ್ಮ ಜಿಲ್ಲೆಯಲ್ಲಿ ಅನ್ಯ ಇಲಾಖೆಗೆ ನಿಯೋಜಿಸಿದ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಹೆಸರು ಮತ್ತು ಮೂಲ ಶಾಲೆಯ ವಿಳಾಸ | ಪ್ರಸ್ತುತ ಯಾವ ಇಲಾಖೆಗೆ ನಿಯೋಜನೆ ಮಾಡಿದೆ/ಮುಂದುವರೆದಿದ್ದಾರೆ | ಸದರಿ ನಿಯೋಜನೆಯನ್ನು ರದ್ದುಪಡಿಸಿ ಮಾತೃ (ಶಿಕ್ಷಣ)ಇಲಾಖೆಗೆ ಹಾಜರುಪಡಿಸಿದ ದಿನಾಂಕ | ನಿಯೋಜನೆ ರದ್ದು ಪಡಿಸದೇ ಇದ್ದಲ್ಲಿ ಸೂಕ್ತ ಕಾರಣ |
|---|---|---|---|---|
| 1 | 2 | 3 | 4 | 5 |

ಈ ರೀತಿ ಕ್ರಮ ಕೈಗೊಳ್ಳದೇ ಇರುವ ವಿಷಯವು ಅತ್ಯಂತ ಗಂಭೀರವೆಂದು ಪರಿಗಣಿಸದ ಉಪನಿರ್ದೇಶಕರುಗಳ ಮೇಲೆ ಇಲಾಖೆ ಆದೇಶ ಜಾರಿಗೊಳಿಸುವಲ್ಲಿ ವಿಫಲರಾಗಿರುವುದನ್ನು ಕರ್ತವ್ಯ ನಿರ್ಲಕ್ಷ್ಯತೆ ಎಂದು ಪರಿಗಣಿಸಿ ಅಮಾನತ್ತಿನಲ್ಲಿಟ್ಟು ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಅಂತಿಮವಾಗಿ ಸೂಚಿಸಿದೆ

06/12/2021

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

ಗೆ,
ಅಗತ್ಯ ಕ್ರಮಕ್ಕಾಗಿ.

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಕಲ್ಬುರ್ಗಿ
4. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು
5. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ)ರವರಿಗೆ
6. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

<u>ಪ್ರತಿಯನ್ನು ಗೌರವಪೂರ್ವಕವಾಗಿ</u>

1.ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ
2.ಕಛೇರಿ ಪ್ರತಿ.